ಭಾಷಾ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗೆ ಸ್ಥಾನಮಾನದ ಪ್ರಮಾಣ ಪತ್ರ ಕೊಡುವ ಬಗ್ಗೆ.

473(4324) ಶ್ರೀ ಅಲೆಕ್ಸಾಂಡರ್ ಜೆ. (ಭಾರತೀನಗರ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮತೀಯ ಹಾಗೂ ಭಾಷಾ ಅಲ್ಪಸಂಖ್ಯಾತರು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯೆಂದು ಪ್ರಮಾಣ ಪತ್ರ ಕೊಡುವ ಸರ್ಕಾರದ ನೀತಿ ಏನು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಸಂವಿಧಾನದ 30ನೇ ಪರಿಚ್ಛೇದದ ಅಡಿಯಲ್ಲಿ ಪ್ರತಿಯೊಂದು ಪ್ರಕರಣದ ಅರ್ಹತೆಗಳ ಆಧಾರದ ಮೇರೆಗ ಸಂಸ್ಥೆಯ ಅಲ್ಪಸಂಖ್ಯಾತ ಸ್ಥಾನವನ್ನು ಪರಿಶೀಲಿಸಬೇಕಾಗುತ್ತದೆ.

ಶ್ರೀ ಜೆ. ಅಲೆಕ್ಸಾಂಡರ್ :— ಮಾನ್ಯ ಅಧ್ಯಕ್ಷರೆ, ಸಂವಿಧಾನದ ಪ್ರಕಾರ ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರುಗಳು ನಡೆಸುತ್ತಿರುವ ಸಂಸ್ಥೆಗಳಿಗೆ ಅಲ್ಪಸಂಖ್ಯಾತ ಸ್ಥಾನಮಾನ ಪ್ರಮಾಣಪತ್ರಗಳನ್ನು ಕೊಡುವುದಕ್ಕೆ ವ್ಯವಸ್ಥೆ ಇದೆಯೆಂದು ಗೊತ್ತಿದೆ. ಆದರೆ ಅವರಿಗೆ ಯಾವ ಅಳತೆಗೋಲಿನ ಮೇಲೆ ಈ ಪ್ರಮಾಣಪತ್ರವನ್ನು ಕೊಡುತ್ತಿರುವುದು? ಮತ್ತು ಯಾವ ಇಲಾಖೆಯಿಂದ ಇವರಿಗೆ ಪ್ರಮಾಣಪತ್ರ ಕೊಡಬೇಕು ಎನ್ನುವ ಬಗ್ಗೆ ಸರ್ಕಾರದಿಂದ ಸ್ಪಷ್ಟೀಕರಣ ನೀಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ (ಸಾರಿಗೆ ಸಚಿವರು) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ) :— ಮಾನ್ಯ ಅಧ್ಯಕ್ಷರೆ, ಸಂವಿಧಾನದ ಆರ್ಟಿಕಲ್ 30ರ ಅಡಿಯಲ್ಲಿ ಅಲ್ಪಸಂಖ್ಯಾತರ ಕೋಮುಗೆ ಸೇರಿರುವಂಥವರಿಗೆ ಸರ್ಟಿಫಿಕೇಟ್‌ನ್ನು ಕೊಡುವಂಥದ್ದು ಆಗಲೇ ಜಾರಿಯಲ್ಲಿದೆ. ನಾವು ರಾಜ್ಯದಲ್ಲಿ ಸಾರ್ವಜನಿಕರ ಶಿಕ್ಷಣ ಇಲಾಖೆ ಆಯುಕ್ತರು ಮತ್ತು ಇತರೆ ಸದಸ್ಯರೊಡನೆ ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ. ಈ ಪ್ರಸ್ತಾವನೆಯು ಸದರಿ ಸಮಿತಿಗೆ ಒಳಪಟ್ಟಂತೆ ಇದರ ಮುಂದೆ ಬಂದು ಪರಿಶೀಲಿಸಿದ ನಂತರ ಭಾಷೆಯ ಅಲ್ಪಸಂಖ್ಯಾತರ ಒಂದು ದೃಢೀಕರಣ ಪತ್ರವನ್ನು ಈ ಸಮಿತಿಯು ನೀಡುತ್ತದೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ :— ಮಾನ್ಯ ಅಧ್ಯಕ್ಷರೆ, ಅಲ್ಪಸಂಖ್ಯಾತರ ಹೆಸರಿನಲ್ಲಿ ಶಾಲಾಕಾಲೇಜುಗಳನ್ನು ಪ್ರಾರಂಭ ಮಾಡಿ ಅಲ್ಲಿಗೆ ಯಾರು ಡೊನೇಷನ್ ಕೊಡುತ್ತಾರೋ ಅವರಿಗೆ ಮಾತ್ರ ಶಾಲೆಗಳಲ್ಲಿ ಸೀಟುಗಳನ್ನು ಕೊಡುತ್ತಾರೆ. ಅಲ್ಪಸಂಖ್ಯಾತರ ಶಾಲೆಗಳಲ್ಲಿ ಅಲ್ಪಸಂಖ್ಯಾತರೇ ಇರುವುದಿಲ್ಲ. ಶೇಕಡಾವಾರು ಆಧಾರದ ಮೇಲೆ ಅಲ್ಪಸಂಖ್ಯಾತರ

ಶಾಲಾ ಕಾಲೇಜುಗಳಲ್ಲಿ ಎಷ್ಟು ಅಲ್ಪಸಂಖ್ಯಾತರಿಗೆ ಅಡ್ಮಿಷನ್ಸ್ ಮಾಡಿದ್ದೀರಿ ಎಂಬುದನ್ನು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹ್ಮದ್ :— ಮಾನ್ಯ ಅಧ್ಯಕ್ಷರೆ, ನಿರ್ದಿಷ್ಟವಾಗಿ ಅಲ್ಪಸಂಖ್ಯಾತರ ಶಾಲೆಗಳು ಯಾವುದು ಎಂಬುದನ್ನು ಸಮಿತಿಯ ಶಿಫಾರಿಸ್ಸಿನ ಆಧಾರದ ಮೇಲೆ ಸರ್ಕಾರದಿಂದ ನಾವು ಗುರುತಿಸಿ ಅವರಿಗೆ ಅನುಮತಿಯನ್ನು ಕೊಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ನಿರ್ದಿಷ್ಟವಾಗಿ ಅಂತಹ ಅಲ್ಪಸಂಖ್ಯಾತರ ಶಾಲೆಗಳಲ್ಲಿ ಈ ರೀತಿಯಲ್ಲಿ ಆಗಿರುವಂಥಾದ್ದು ಸರ್ಕಾರದ ಗಮನಕ್ಕೆ ತಂದಾಗ ಬಹುಶಃ ಅದರ ಬಗ್ಗೆ ಸರ್ಕಾರದಿಂದ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ :— ಮಾನ್ಯ ಅಧ್ಯಕ್ಷರೇ, ಆರ್ಟಿಕಲ್ 30ರ ಅಡಿಯಲ್ಲಿ ಎಷ್ಟು ಜನರಿಗೆ ಇಂತಹ ಪ್ರಮಾಣ ಪತ್ರಗಳನ್ನು ಕೊಟ್ಟಿದ್ದಾರೆ? ಇದು ತಮ್ಮ ಗಮನಕ್ಕೆ ಬಂದಿದೆಯೇ ಎಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮಾನ್ಯ ಅಧ್ಯಕ್ಷರೆ, ತತ್‌ಕ್ಷಣದಲ್ಲಿ ಈ ಮಾಹಿತಿ ನನ್ನ ಹತ್ತಿರ ಲಭ್ಯವಿಲ್ಲ. ಪ್ರಶ್ನೆ ರೂಪದಲ್ಲಿ ಅಥವಾ ಪ್ರತ್ಯೇಕವಾಗಿ ಕೇಳಿದಾಗ ಅವರಿಗೆ ಆ ಮಾಹಿತಿಯನ್ನು ಒದಗಿಸಿಕೊಡಲಾಗುವುದು.

ಅಧ್ಯಕ್ಷರು :— ಶ್ರೀ ಜಗದೀಶ್ ಶೆಟ್ಟರ್ ಅವರೇ, ತಮ್ಮ ಪ್ರಶ್ನೆಯನ್ನು ಕೇಳಿ.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಯಲ್ಲಿ ಸ್ವಲ್ಪ ಕನ್‌ಫ್ಯೂಸ್ ಆಗಿದೆ. ಅಂದರೆ ಸರ್ಕಾರಿ ಕ್ಯಾನ್ಸರ್ ಆಸ್ಪತ್ರೆ ಎಂದು ಆಗಿದೆ. ಇಲ್ಲಿ ಸರಕಾರಿ ಬದಲು ಸಹಕಾರಿ ಅಂದರೆ ಕೊ-ಆಪರೇಟೀವ್ ಕ್ಯಾನ್ಸರ್ ಆಸ್ಪತ್ರೆ ಎಂದು ಆಗಬೇಕಾಗಿತ್ತು. ಆದ್ದರಿಂದ ಇದಕ್ಕೆ ಸರಿಯಾದ ಉತ್ತರ ಸರ್ಕಾರದಿಂದ ಬೇಕಾಗುತ್ತದೆ. ಆದ್ದರಿಂದ ಮುಂದಿನ ಸಲ ತೆಗೆದುಕೊಳ್ಳೋಣ. ಅಥವಾ ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ರೆಡಿಯಾಗಿದ್ದರೆ ನಾನು ಈಗಲೇ ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು :— ಈ ಪ್ರಶ್ನೆಯನ್ನು ನಾವು ಶೂನ್ಯವೇಳೆಯಲ್ಲಿ ತೆಗೆದುಕೊಳ್ಳೋಣ. ಆಗಬಹುದಲ್ಲವೇ?

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೇ, ಆಗಬಹುದು.

ಅಧ್ಯಕ್ಷರು :— ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.